# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 09
ಪಿಡಬ್ಲ್ಯೂ: 12

**ದಿನಾಂಕಃ 02-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿದಾರರ ಹೆಸರು : ಸಿದ್ದಲಿಂಗಪ್ಪ

ತಂದೆಯ ಹೆಸರು : ಚನ್ನಬಸಪ್ಪ

ವಯಸ್ಸು : 43 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಕಡಕೋಳ, ಹರಪನಹಳ್ಳಿ ತಾಲ್ಲೂಕು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿತನ ಪರಿಚಯವಿದೆ. ಆರೋಪಿತನ ಪತ್ನಿ ಸುಮಾಳ ಪರಿಚಯವಿದೆ. ಆರೋಪಿತ ತನ್ನ ಪತ್ನಿಯನ್ನು ಕೊಲೆ ಮಾಡಿ ಸೀರೆಯಲ್ಲಿ ಸುತ್ತಿ ಆರೋಪಿತನ ಮನೆಯ ಹಾಲ್ ನಲ್ಲಿ ಇದ್ದ ಮಂಚದ ಕೆಳಗಿನ ಭೂಮಿಯನ್ನು ಅಗೆದು ಅದರಲ್ಲಿ ಹೂತಿಟ್ಟಿದ್ದನು. ಆ ರೀತಿ ಶವವನ್ನು ಹೂತಿಟ್ಟ ನಂತರ ಅದರ ಮೇಲೆ ಪುನಃ ಕಡಪಕಲ್ಲು ಹಾಕಿ ಮುಚ್ಚಿಟ್ಟಿದ್ದನು.

**2.** ನನಗೆ ಚಾಸಾ–15 ರವರ ಪರಿಚಯವಿದೆ. ಆರೋಪಿತನ ಪತ್ನಿಯ ತಮ್ಮ ಕರಿಬಸಪ್ಪ (ಚಾಸಾ–15) ನನ್ನ ಜೊತೆ ಕೆಲಸ ಮಾಡುತ್ತಿದ್ದನು. ಆತನು ನನಗೆ ಆರೋಪಿತ ತನ್ನ ಪತ್ನಿಗೆ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದ ವಿಷಯವನ್ನು ತಿಳಿಸುತ್ತಿದ್ದನು. ಚಾಸಾ–15 ರವರಿಗೆ ಸುಮಾ ಈ ವಿಷಯವನ್ನು ತಿಳಿಸುತ್ತಿದ್ದಳು. ಈಗ ಸುಮಾರು 1 ವರ್ಷದ ಹಿಂದೆ ಆರೋಪಿತ ಅವರ 5 ವರ್ಷದ ಗಂಡು ಮಗುವನ್ನು ಕರೆದುಕೊಂಡು ಚಾಸಾ–15 ರವರ ತಂದೆಯ ಊರಾದ ಬೆಣ್ಣೆಹಳ್ಳಿಗೆ ಹೋಗಿ ತನ್ನ ಪತ್ನಿ ಸುಮಾ ಕಾಣುತ್ತಿಲ್ಲ ಎಂದು ಹೇಳಿದನಂತೆ. ಈ ವಿಷಯವನ್ನು ನನಗೆ ಚಾಸಾ–15 ತಿಳಿಸಿರುತ್ತಾರೆ. ಆ ರೀತಿ ಆರೋಪಿತ ಮಗುವನ್ನು ಚಾಸಾ–

**15** ರವರ ತಂದೆಯ ಮನೆಗೆ ಕರೆದುಕೊಂಡು ಹೋದ ಸುಮಾರು **1** ವಾರಕ್ಕೆ ಆರೋಪಿತನ ಪತ್ನಿಯ ಕೊಲೆಯಾದ ವಿಷಯ ತಿಳಿಯಿತು.

**3.** ಇದಕ್ಕೆ ಸಂಬಂಧಿಸಿದಂತೆ ನಮ್ಮ ಊರಾದ ಕಡಕೋಳ ಮತ್ತು ಬೆಣ್ಣೆಹಳ್ಳಿಯಿಂದ ಸೇರಿ ಸುಮಾರು **12** ಜನ ಆರೋಪಿತನ ಊರಾದ ಕೋಣನೂರಿಗೆ ಹೋದೆವು. ಅಲ್ಲಿ ಆರೋಪಿತನ ಮನೆ ಬಳಿ ಹೋದೆವು. ಅಲ್ಲಿಗೆ ಆರೋಪಿತನನ್ನು ಪೊಲೀಸರು ಕರೆತಂದಿದ್ದರು. ಆರೋಪಿತ ತಾನು ಸುಮಾಳ ಕೊಲೆ ಮಾಡಿ ಹೂತಿಟ್ಟಿದ್ದ ಜಾಗವನ್ನು ಪೊಲೀಸರಿಗೆ ತೋರಿಸಿದ್ದನು. ಇದಕ್ಕೆ ಸಂಬಂಧಿಸಿದಂತೆ ಸದರಿ ಕಡಪಕಲ್ಲನ್ನು ತೆಗೆದು ಸದರಿ ಜಾಗವನ್ನು ಅಗೆಯುವ ಸಂದರ್ಭದಲ್ಲಿ ನಾನು ಹಾಜರಿದ್ದೆನು. ಆಗ ಪೊಲೀಸರಲ್ಲದೇ ಇತರೆ ಇಲಾಖೆಯ ಅಧಿಕಾರಿಗಳು ಹಾಜರಿದ್ದರು. ಸದರಿ ಹೊರ ತೆಗೆದ ಶವವನ್ನು ನಾನು ನೋಡಿರುತ್ತೇನೆ. ಅದು ಸುಮಾಳ ಶವವಾಗಿತ್ತು. ನಮ್ಮ ಊರಿನಿಂದ ಬೆಣ್ಣೆಹಳ್ಳಿ ಸುಮಾರು ಒಂದೂವರೆ ಕಿಮೀ ದೂರದಲ್ಲಿದೆ ಮತ್ತು ಸುಮಾ ಕಡಕೋಳದಲ್ಲಿದ್ದ ತನ್ನ ದೊಡ್ಡಮ್ಮನ ಮನೆಗೆ ಆಗಾಗ ಬರುತ್ತಿದ್ದ ಕಾರಣ ನಾನು ಅವಳನ್ನು ಮೊದಲು ನೋಡಿದ್ದೆನು. ಆದ್ದರಿಂದ ಅವಳ ಶವವನ್ನು ಗುರುತು ಹಿಡಿದಿರುತ್ತೇನೆ.

**4.** ಸದರಿ ಘಟನೆ ನಡೆದ ಸುಮಾರು **1** ವಾರಕ್ಕೆ ನಾನು ಚಿತ್ರದುರ್ಗದ ಪೊಲೀಸ್ ಠಾಣೆಯಲ್ಲಿ ಈಗ ನನಗೆ ತೋರಿಸಿದ ಪಂಚನಾಮೆಗೆ ಸುಮಾರು ಮದ್ಯಾಹ್ನ **1.00** ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ–**14** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**14**(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತನಿಖಾಧಿಕಾರಿ ಯಾವುದೇ ವಸ್ತುವನ್ನು ಅಥವಾ ದಾಖಲೆಯನ್ನು ಯಾರಿಂದಲೂ ನನ್ನ ಸಮಕ್ಷಮ ವಶಕಪಡಿಸಿಕೊಳ್ಳಲಿಲ್ಲ.

(ಈ ಹಂತದಲ್ಲಿ ಪಂಚನಾಮೆಗೆ ಸ್ವಲ್ಪ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಮಾನ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಅನುಮತಿ ಕೊಡಲಾಯಿತು)

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

**5.** ದಿನಾಂಕ **11–01–2022** ರಂದು ನಾನು ಡಿವೈ.ಎಸ್.ಪಿ ಕಛೇರಿಗೆ ಹೋಗಿದ್ದು ಎಂದರೆ ನಿಜ. ಆ ಸಂದರ್ಭದಲ್ಲಿ ಸುಮಾಳ ತಂದೆ ಚಾಸಾ–**1** ತನ್ನ ಮಗಳು ಮತ್ತು ಆರೋಪಿತನ ಮದುವೆಯ ಲಗ್ನಪತ್ರಿಕೆಯನ್ನು ಹಾಜರುಪಡಿಸಿದರು ಎಂದರೆ ನಿಜ. ಅದನ್ನು ವಶಪಡಿಸಿಕೊಂಡು ತನಿಖಾಧಿಕಾರಿ ನಿಪಿ–**14** ರಂತೆ ಮದ್ಯಾಹ್ನ **1.30** ರಿಂದದ **2.00** ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಎಂದರೆ ನಿಜ. ಸದರಿ ಲಗ್ನಪತ್ರಿಕೆಯನ್ನು ಈಗ ನೋಡಿದೆ ಅದನ್ನು ನಿಪಿ–**15** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಬಿ. ವಕೀಲರಿಂದಃ**

ಆರೋಪಿತನ ಪರ ವಕೀಲರು ಗೈರು ಹಾಜರು. ಸ್ವತಃ ಆರೋಪಿತನಿಂದ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.